ಮತ್ತೊಂದು ಶಿಕ್ಷಕರ ಹುದ್ದೆಯನ್ನು ನಾವು ಕಲ್ಪಿಸಿದ್ದೇವೆ. ಇದು 4ನೇ ಹಂತದಲ್ಲಿ 4597 ಏಕೋಪಾಧ್ಯಯ ಶಾಲೆಗಳಿಗೆ ಮತ್ತೊಬ್ಬ ಶಿಕ್ಷಕರನ್ನು ನೇಮಿಸುವ ಪ್ರಸ್ತಾಪನೆ ಆಗಿದೆ. ಇವರನ್ನು ಜೂನ್‌ನಿಂದ ಒದಗಿಸುತ್ತಿದ್ದೇವೆ. ನಮ್ಮ ಸರ್ಕಾರಕ್ಕೆ ಬಂದಂತಹ ಮಾಹಿತಿ ಪ್ರಕಾರ ನಮ್ಮ ಅನುಪಾತ ಎಷ್ಟು ಎಂದರೆ 50 ಮಕ್ಕಳಿಗೆ ಒಬ್ಬ ಉಪಾಧ್ಯಾಯರು. ಇದು ಸಾಮಾನ್ಯವಾಗಿರತಕ್ಕಂಥಾದ್ದು. ಅದರ ಪ್ರಕಾರ ಇಡೀ ರಾಜ್ಯದಲ್ಲಿ 12 ಸಾವಿರ ಹೆಚ್ಚುವರಿ ಶಿಕ್ಷಕರ ಅವಶ್ಯಕತೆ ಇದೆ. ತಾವು ಹೇಳತಕ್ಕಂಥದ್ದು ಗ್ರಾಮಾಂತರ ಪ್ರದೇಶಗಳ ಪ್ರಶ್ನೆ. ಗ್ರಾಮಾಂತರ ಪ್ರದೇಶಗಳಲ್ಲಿ 20 ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರನ್ನು ನೇಮಿಸುವಂತೆ ಅನುಪಾತದ ಸಡಿಲಿಕೆ ಮಾಡಿದ್ದೇವೆ. ಇದಕ್ಕೆ ಸರ್ಕಾರ ಬದ್ಧವಾಗಿದೆ. ಅದು ಎಷ್ಟರಮಟ್ಟಿಗೆ ಹೋಗುತ್ತದೆ ಎಂದರೆ 300 ಜನಸಂಖ್ಯೆಯುಳ್ಳ ಹಳ್ಳಿಗೆ ಒಂದು ಶಾಲೆ, 1 ಕಿ.ಮಿ. ಅಂತರದಲ್ಲಿ ಒಂದು ಶಾಲೆ. ಇದು ನಮ್ಮ ಸರ್ಕಾರದ ನೀತಿ. ಸರ್ಕಾರ ಇದಕ್ಕೆ ಕೂಡ ಬದ್ಧವಾಗಿದೆ. ಈ ಅನುಪಾತದ ಮೇರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಕರನ್ನು ಒದಗಿಸತಕ್ಕ ಕಾರ್ಯಕ್ರಮಕ್ಕೆ ಸರ್ಕಾರ ಬದ್ಧವಾಗಿದೆ. ಅದಕ್ಕಾಗಿ ನಾನು ಹೇಳಿದೆ. 20 ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕರನ್ನು ಒದಗಿಸುತ್ತೇವೆ, ಅಂದರೆ ಒಂದು ವರ್ಗಕ್ಕೆ ಒಬ್ಬ ಅಧ್ಯಾಪಕ ಎಂದು ಆ ದಾಮಾಷಾ ಪ್ರಕಾರ ಹೇಳಿದೆ. ನಮ್ಮ ಗಣಿತದಲ್ಲಿ ವ್ಯತ್ಯಾಸವೇನೂ ಇಲ್ಲ. ನಮ್ಮಲ್ಲಿ ಇರತಕ್ಕ ನೀತಿ ಮತ್ತು ಅನುಪಾತಕ್ಕೆ ಹೊಂದಾಣಿಕೆಯಾಗುತ್ತದೆ. ಆ ಪ್ರಕಾರ ಶಿಕ್ಷಕರನ್ನು ಒದಗಿಸುವ ದಿಸೆಯಲ್ಲಿ ಕಾರ್ಯೋನ್ಮುಖರಾಗಿದ್ದೇವೆ.

ಉಪಾಧ್ಯಕ್ಷರು : ಶ್ರೀ ಡಿ.ಕೆ. ಶಿವಕುಮಾರ್‌ರವರ ಪ್ರಶ್ನೆಗೆ ಸಮಯ ಕೇಳಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ : ನಾನು ಈ ಪ್ರಶ್ನೆ ಹಾಕಿ ಆರು ತಿಂಗಳಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ : ನನಗಿನ್ನೂ ಮಾಹಿತಿ ಬಂದಿಲ್ಲ.

ಸಿದ್ದಾಪುರದಲ್ಲಿ ಜಿಲ್ಲಾ ಪರಿಷತ್ತಿನ ಪ್ರೌಢ ಶಾಲೆ

1121 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ಸಿದ್ದಾಪುರ ಜಿ.ಪ. ಪ್ರೌಢಶಾಲೆಗೆ ಮಂಜೂರಾದ ಶಿಕ್ಷಕರ ಸಂಖ್ಯೆ ಎಷ್ಟು (ಹುದ್ದೇವಾರು ವಿವರ)?

ಆ) ಈಗ ಕೊರತೆ ಇರುವ ಶಿಕ್ಷಕರ ಸಂಖ್ಯೆ ಎಷ್ಟು (ಹುದ್ದೇವಾರು ವಿವರ ನೀಡುವುದು)

ಇ) ಈ ಕೊರತೆಯನ್ನು ಯಾವಾಗ ತುಂಬಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) 8 ಶಿಕ್ಷಕರ ಹುದ್ದೆಗಳು.

1) ಮುಖ್ಯೋಪಾಧ್ಯಾಯರು	-1
2) ಸಹ ಶಿಕ್ಷಕರು	-5
3) ವೃತ್ತಿ ಶಿಕ್ಷಕರು	-1
4) ದೈಹಿಕ ಶಿಕ್ಷಕರು	-1
ಒಟ್ಟು	**-8**

ಆ) ಕೊರತೆ ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೇ, ಈ ವಿದ್ಯಾರ್ಥಿಗಳ ಸಂಖ್ಯೆ ಅನುಗುಣವಾಗಿ ಶಿಕ್ಷಕರನ್ನು ತುಂಬಲಾಗಿದೆಯೇ? ವಿದ್ಯಾರ್ಥಿಗಳ ನಿಷ್ಪತ್ತಿಗೆ ಅನುಗುಣವಾಗಿ ಈ ಹುದ್ದೆಯನ್ನು ಮಂಜೂರು ಮಾಡಲಾಗಿದೆಯೇ? 20 ವರ್ಷಗಳ ಹಿಂದೆ ಈ ಒಂದು ಆಧಾರದ ಮೇಲೆ ಇಂತಿಷ್ಟು ಅಧ್ಯಾಪಕರು ಎಂದು ಮಂಜೂರು ಮಾಡಲಾಗಿತ್ತು. ಆದರೆ ಇಂದಿನ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳ ನಿಷ್ಪತ್ತಿಗನುಗುಣವಾಗಿ ಅಧ್ಯಾಪಕರನ್ನು ಮಾಡಲಾಗಿದೆಯೇ? 8 ಮತ್ತು 9ನೇ ತರಗತಿಯಲ್ಲಿ ಫೇಲಾದ ವಿದ್ಯಾರ್ಥಿಗಳಿಗೆ ಪುನಃ ಶಾಲೆಗೆ ಹೋಗತಕ್ಕಂತಹ ವ್ಯವಸ್ಥೆ ಇಲ್ಲ. ಅದರಲ್ಲೂ ಕುಂದಾಪುರ ತಾಲ್ಲೂಕಿನಲ್ಲಿ ಆಗಿರುವ ಎಲ್ಲ ಶಾಲೆಗಳಲ್ಲಿ ಈ ಅವ್ಯವಸ್ಥೆ ಇದೆ. ಈ ಅವ್ಯವಸ್ಥೆಯನ್ನು ಸರಿಪಡಿಸಿ ಅಧ್ಯಾಪಕರ ನೇಮಕಾತಿಗೆ ಏನಾದರೂ ಬದಲಿ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ ಈ ಶಾಲೆಗೆ ನಿಷ್ಪತ್ತಿ ಪ್ರಕಾರ ಅಂದರೆ ಎಷ್ಟು ವಿದ್ಯಾರ್ಥಿಗಳಿಗೆ ಎಷ್ಟು ಶಿಕ್ಷಕರು ಬೇಕೊ ಆ ಅನುಪಾತದ ನಿಷ್ಪತ್ತಿ ಪ್ರಕಾರ ಸರಿ ಇದೆ. ತಾವು ಹೊಸ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಏನು ಬದಲಿ ವ್ಯವಸ್ಥೆ ಮಾಡುತ್ತೀರಿ ಎಂದು ಕೇಳಿದ್ದೀರಿ, ಅದರ ಬಗ್ಗೆ ನಾನು ವಿಚಾರ ಮಾಡುತ್ತೇನೆ.

ಚಿಕ್ಕಬಳ್ಳಾಪುರದಲ್ಲಿರುವ ಪುರಸಭಾ ಮಹಾವಿದ್ಯಾಲಯ

1190 - ಶ್ರೀ ಸಿ.ವಿ. ವೆಂಕಟರಾಯಪ್ಪ (ಬಾಗೇಪಲ್ಲಿ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕಬಳ್ಳಾಪುರದ ಮುನಿಸಿಪಲ್ ಪ್ರಥಮ ದರ್ಜೆ ಕಾಲೇಜು (ಈಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು) ಇಲ್ಲಿ ಒಬ್ಬ ದ್ವಿತೀಯ ದರ್ಜೆ ಸಹಾಯಕರು 1973 ರಿಂದ 1976 ರವರೆಗೆ ಕೆಲಸ ಮಾಡುತ್ತಿದ್ದು ಅದೇ ಕಾಲೇಜಿನಲ್ಲಿ ಅದೇ ಪ್ರಾಂಶುಪಾಲರ ಕೆಳಗೆ ಹಗಲು-ವಿದ್ಯಾರ್ಥಿಯಾಗಿ ಬಿ.ಬಿ.ಎಂ. ಕೋರ್ಸಿಗೆ ಹಾಜರಾಗಿರುವರೇ?*

ಆ) *ಈ ಮೂರು ವರ್ಷಗಳ ಅವಧಿಯಲ್ಲಿ ಆತನು ವಿದ್ಯಾರ್ಥಿಯಾಗಿ ಹಾಗೂ ಕಛೇರಿಯ ಗುಮಾಸ್ತನಾಗಿ ಶೇಕಡವಾರು ಎಷ್ಟು ಹಾಜರಾತಿ ಪಡೆದಿದ್ದಾನೆ.*

ಇ) *ಈ ಮೂರು ವರ್ಷಗಳ ಅವಧಿಯಲ್ಲಿ ಆತನು ಪಡೆದ ಒಟ್ಟು ಸಂಬಳವೆಷ್ಟು?*

ಈ) *ಈ ಅವಧಿಯಲ್ಲೇ ಆತನಿಗೆ ಬಿ.ಬಿ.ಎಂ.ಡಿಗ್ರಿ ಕೊಟ್ಟಿರುವುದು ವಾಸ್ತವವೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ಹೌದು.

ಆ) ವಿದ್ಯಾರ್ಥಿಯಾಗಿ ಶೇಕಡ 75. ಈ ಕಛೇರಿಯ ಗುಮಾಸ್ತನಾಗಿ ಶೇಕಡ 95.

ಇ) ರೂ. 12,189-05

ಈ) ಇಲ್ಲ.

SRI C.V. VENKATARAYAPPA : You have stated that simultaneously he worked as a clerk and as a student during the same hours. Simultaneously you have stated. I am now putting this question from the answers supplied. Shall I take that he attended the office as a Clerk and BBM Course as a student during the same hours for 3 years.?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಸಭಾದ್ಯಕ್ಷಣಿಯರೇ, ನಮಗೆ ಬಂದಿರುವ ಮಾಹಿತಿಗೂ ತಮ್ಮ ಮಾಹಿತಿಗೂ ಹೋಲಿಕೆ ಆಗುತ್ತದೆಯೋ ಇಲ್ಲವೋ